# ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ನಂದಿನಗರ, ಅಂಚೆ ಪೆಟ್ಟಿಗೆ ಸಂ. 6, ಬೀದರ – 585 226, ಕರ್ನಾಟಕ

**ಕುಲಸಚಿವರ ಕಛೇರಿ**

**Phone** : 08482 – 245241
**Email** : regkvafsu@gmail.com
**Website** : www.kvafsu.edu.in


No. RGR-ACAD0ADMN/8/2024-ACDM-KVAFSU024-25 ದಿನಾಂಕ: 28-06-2024

**ಅರ್ಜಿ ಸಲ್ಲಿಸುವ**
**ಪ್ರಾರಂಭ ದಿನಾಂಕ: 01.07.2024**
**ಕೊನೆಯ ದಿನಾಂಕ: 31.07.2024**
**ಲಿಂಕ್- http://bit.ly/4bgLMCv**

**ಆನ್‌ಲೈನ್ ಅರ್ಜಿ-QR code**

SCAN ME

## ಅಧಿಸೂಚನೆ

**ವಿಷಯ:-** 2024-2025ನೇ ಶೈಕ್ಷಣಿಕ ಸಾಲಿನ ಪಶುಸಂಗೋಪನಾ ಡಿಪ್ಲೋಮಾ ಪ್ರವೇಶ ಕುರಿತು.

**ಉಲ್ಲೇಖ:** ಸಂಖ್ಯೆ:ವಿನಿ/ಶೈಕ್ಷಣಿಕ/ಪಸಂ-ಡಿಪ್ಲೋಮಾ-ಪ್ರವೇಶ/2024-25,ದಿನಾಂಕ:14-06-2024

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ವ್ಯಾಪ್ತಿಯಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಪಶುಸಂಗೋಪನೆಯಲ್ಲಿ 2 ವರ್ಷ ಅವಧಿಯ ಡಿಪ್ಲೋಮಾ ಕೋರ್ಸಿನ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ (**Online**) ಮುಖಾಂತರ ಅರ್ಜಿಗಳನ್ನು ಅಹ್ವಾನಿಸುವ ಕುರಿತು.

1. **ಕೋರ್ಸಗಳ ವಿವರ:**

| ಕ್ರ.ಸಂ | ಕೋರ್ಸಗಳು | ವಿದ್ಯಾರ್ಹತೆ | ಪಾಲಿಟೆಕ್ನಿಕ್ | ಲಭ್ಯವಿರುವ ಒಟ್ಟು ಸೀಟು |
|---|---|---|---|---|
| 01 | ಪಶುಸಂಗೋಪನಾ ಡಿಪ್ಲೋಮಾ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ/ ತತ್ಸಮಾನ ಪರೀಕ್ಷೆಯೊಂದಿಗೆ ಕನ್ನಡ ಒಂದು ವಿಷಯವನ್ನು ಕಡ್ಡಾಯವಾಗಿ ಓದಿ ಕನಿಷ್ಠ ಶೇ. 45 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು (ಪ.ಜಾತಿ/ಪ.ಪಂಗಡ/ಪ್ರವರ್ಗ-1ರ ಅಭ್ಯರ್ಥಿಗಳು ಶೇ.40 ರಷ್ಟು ಅಂಕಗಳನ್ನು ಪಡೆದು ತೇರ್ಗಡೆ-ಯಾಗಿರಬೇಕು) ಮತ್ತು ಕಡ್ಡಾಯವಾಗಿ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು. | 1) ಪಶುಸಂಗೋಪನಾ ಪಾಲಿಟೆಕ್ನಿಕ್, ಜಾನುವಾರು ಸಂಶೋಧನಾ ಹಾಗೂ ಮಾಹಿತಿ ಕೇಂದ್ರ, ಕೊನೆಹಳ್ಳಿ, ತಿಪಟೂರ ತಾಲ್ಲೂಕು, ತುಮಕೂರು ಜಿಲ್ಲೆ | 50 |
| | | | 2) ಪಶುಸಂಗೋಪನಾ ಪಾಲಿಟೆಕ್ನಿಕ್, ಕುನ್ನೂರು, ಶಿಗ್ಗಾಂವ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ | 50 |
| | | | 3) ಪಶುಸಂಗೋಪನಾ ಪಾಲಿಟೆಕ್ನಿಕ್, ಕೊರವಂಗಲ ಕ್ರಾಸ್, ಹಾಸನ ಜಿಲ್ಲೆ | 50 |
| | | | 4) ಪಶುಸಂಗೋಪನಾ ಪಾಲಿಟೆಕ್ನಿಕ್, ಬರ್ಗಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ | 50 |
| | | | 5) ಪಶುಸಂಗೋಪನಾ ಪಾಲಿಟೆಕ್ನಿಕ್, ಡೋರ್ನಳ್ಳಿ, ಶಾಹಪೂರ ತಾಲ್ಲೂಕು, ಯಾದಗಿರ ಜಿಲ್ಲೆ | 50 |

**ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ **31.07.2024**ರಂದು ಅಭ್ಯರ್ಥಿಯ ವಯಸ್ಸು 20 ವರ್ಷ ಮೀರಿರಬಾರದು.

**ಬೋಧನಾ ಮಾಧ್ಯಮ:**

- ಪಶುಸಂಗೋಪನಾ ಡಿಪ್ಲೋಮಾದ ತರಗತಿಗಳನ್ನು ಕನ್ನಡ ಮಾಧ್ಯಮದಲ್ಲಿ ನಡೆಸಲಾಗುವುದು.

**ಶಿಷ್ಯ ವೇತನ:**

- ಪ್ರವೇಶ ಪಡೆದ ಎಲ್ಲಾ ಅಭ್ಯರ್ಥಿಗಳಿಗೆ ರೂ.1000/-ಗಳ ಮಾಸಿಕ ಶಿಷ್ಯ ವೇತನವನ್ನು ವ್ಯಾಸಂಗದ ಅವಧಿಯಲ್ಲಿ ನಿಯಮಾನುಸಾರ ನೀಡಲಾಗುವುದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ಅಡಕಗಳು:**

- ಅರ್ಜಿಯನ್ನು ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html)ದಲ್ಲಿ ಭರ್ತಿಮಾಡುವುದು. ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿಮಾಡುವ **ದಿನಾಂಕ 01.07.2024** ರಿಂದ ಪ್ರಾರಂಭವಾಗುವುದು ಹಾಗೂ ಕೊನೆಯ ದಿನಾಂಕ**: 31.07.2024**. ಇತರೇ ಮೂಲಗಳಿಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೆ ಸ್ವೀಕರಿಸಲಾಗುವುದಿಲ್ಲ.
- ಅರ್ಜಿಯ ಶುಲ್ಕವು ಆನ್‌ಲೈನ್ ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಮುಖಾಂತರವೇ ಪಾವತಿಸುವುದು. ಇತರೇ ಯಾವುದೇ ಮೂಲಗಳಿಂದ ಅರ್ಜಿಯ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.

**ಅರ್ಜಿ ಶುಲ್ಕ ವಿವರ**

| ಸಾಮಾನ್ಯ/2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ | ಪ.ಜಾ/ಪ.ಪ./ಪ್ರವರ್ಗ–1 ಅಭ್ಯರ್ಥಿಗಳಿಗೆ |
|---|---|
| ರೂ.700/– | ರೂ. 350/– |

**ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕಾದ ಅಗತ್ಯ ಪ್ರಮಾಣ ಪತ್ರಗಳು:**

1. ಎಸ್.ಎಸ್.ಎಲ್.ಸಿ, ಅಂಕ ಪಟ್ಟಿ (ಕಂಪ್ಯೂಟರ್ ಪ್ರಿಂಟ್ ಇದ್ದಲ್ಲಿ ಮುಖ್ಯ ಗುರುಗಳ ಸಹಿ ಹಾಗೂ ಮೊಹರು ಹೊಂದಿರಬೇಕು).
2. 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ **"ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ"**, (ನಿಗದಿತ ದಿನಾಂಕದ ಒಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಹಿ ಹಾಗೂ ಮೊಹರ ಹೊಂದಿರಬೇಕು).
3. ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
4. ಅನುಚ್ಛೇದ 371(ಜೆ) ರಂತೆ ಕಲ್ಯಾಣ–ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಾಗಿದ್ದರೆ ಸೂಕ್ತವಾದ ಪ್ರಮಾಣ ಪತ್ರ. (ಪ್ರಮಾಣ ಪತ್ರವನ್ನು ಸಹಾಯಕ ಆಯುಕ್ತರವರಿಂದ ಪಡೆಯತಕ್ಕದ್ದು).
5. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50% ರಷ್ಟು ಸೀಟುಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ ಪ್ರವೇಶಾತಿಗೆ ಮೀಸಲಿಡಲಾಗಿದೆ. ಅಭ್ಯರ್ಥಿಗಳು ಈ ಕೋಟಾದಡಿ ಪ್ರವೇಶ ಬಯಸಿದ್ದಲ್ಲಿ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಲಗತ್ತಿಸಬೇಕು (ನಮೂನೆಗಳನ್ನು ಲಗತ್ತಿಸಲಾಗಿದೆ).
   I. ವ್ಯವಸಾಯಗಾರರ ಪ್ರಮಾಣ ಪತ್ರ / ಕೃಷಿ ಮತ್ತು ಕೃಷಿ ಸಂಬಂಧಿತ ಕೂಲಿ ಕಾರ್ಮಿಕರ ಪ್ರಮಾಣ ಪತ್ರ – RD ಸಂಖ್ಯೆಯೊಂದಿಗೆ ಕಂದಾಯ ಇಲಾಖೆಯಲ್ಲಿ ಕೊಡುವ ಪ್ರಮಾಣ ಪತ್ರ.
   II. ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕೃಷಿಕರ ಕೋಟಾದಡಿಯಲ್ಲಿ ಅರ್ಜಿಯನ್ನು ಪರಿಗಣಿಸಲು ಕಡ್ಡಾಯವಾಗಿ ಲಗತ್ತಿಸುವುದು RD ಸಂಖ್ಯೆ ಮತ್ತು QR ಕೋಡ್‌ನೊಂದಿಗೆ ತಹಶೀಲ್ದಾರ್ ರವರು ಕೊಡುವ ಪ್ರಮಾಣ ಪತ್ರ

**ಸೂಚನೆಗಳು:**

a. ಅಭ್ಯರ್ಥಿಗಳು ಮೊಬೈಲ್ ನಂಬರ / ದೂರವಾಣಿ / ಇ–ಮೇಲ್ ಐಡಿಯನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು.
b. **ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ತಾವು ಪ್ರವೇಶ ಪಡೆಯಲು ಬಯಸುವ ಐದು ಪಶುಸಂಗೋಪನಾ ಪಾಲಿಟೆಕ್ನಿಕ್‌ನ ಆಯ್ಕೆಯನ್ನು ತಮ್ಮ ಆದ್ಯತೆಯಂತೆ ಕಡ್ಡಾಯವಾಗಿ ನಮೂದಿಸುವುದು.**
c. ಅರ್ಜಿಯನ್ನು ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ (ಅಂತಿಮವಾಗಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವುದಕ್ಕಿಂತ ಮುಂಚೆ ಎಲ್ಲಾ ವಿವರಗಳನ್ನು ಪರಿಶೀಲಿಸುವುದು).
d. ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ**: 01.07.2024**
e. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ**: 31.07.2024**
f. ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ಸಲ್ಲಿಸಿದ ಅರ್ಜಿಗಳ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಈ ಕೆಳಗೆ ನಮೂದಿಸಿದ ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳಲ್ಲಿ ದಿನಾಂಕ**: 06.08.2024 ರಿಂದ 08.08.2024** ರವರೆಗೆ ಹಮ್ಮಿಕೊಳ್ಳಲಾಗುವುದು (ಅಭ್ಯರ್ಥಿಗಳು ತಮಗೆ ಸಮಿಪದ ಒಂದು ದಾಖಲಾತಿ ಪರಿಶೀಲನಾ ಕೇಂದ್ರದ ಆಯ್ಕೆಯನ್ನು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಮಾಡಬೇಕು).

| **ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳು:** | | **ದಿನಾಂಕ:** |
|---|---|---|
| 1. ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ (Veterinary College, Nandinagar, Bidar)<br>2. ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು (Veterinary College, Hebbal, Bengaluru)<br>3. ಪಶುವೈದ್ಯಕೀಯ ಮಹಾವಿದ್ಯಾಲಯ, ಹೊಂಬಳ ರಸ್ತೆ, ಗದಗ (Veterinary College, Hombal Road, Gadag)<br>4. ಮೀನುಗಾರಿಕೆ ಮಹಾವಿದ್ಯಾಲಯ, ಕಂಕನಾಡಿ, ಮಂಗಳೂರು (College of Fishereis, Kankanadi, Mangaluru)<br>5. ಪಶುವೈದ್ಯಕೀಯ ಮಹಾವಿದ್ಯಾಲಯ, ಗೋಕುಲ ಆವರಣ, ವಿದ್ಯಾನಗರ, ಹಾಸನ (Veterinary College, Gokul Campus, Vidyanagar, Hassan) | ಎಸ್‌ಎಸ್‌ಎಲ್‌ಸಿ ಫಲಿತಾಂಶ 75% ಮೇಲ್ಪಟ್ಟ ಅಭ್ಯರ್ಥಿಗಳಿಗೆ | **06.08.2024** |
| | ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ರಿಂದ 75% ವರೆಗಿನ ಅಭ್ಯರ್ಥಿಗಳಿಗೆ | **07.08.2024** |
| | ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ಕ್ಕಿಂತ ಕೆಳಗಿನ ಅಭ್ಯರ್ಥಿಗಳಿಗೆ | **08.08.2024** |

**ಸೂಚನೆಗಳು:**

1. **ದಾಖಲಾತಿ ಪರಿಶೀಲನೆಯ ಸಮಯ ಬೆಳಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯ ವರೆಗೆ ಮಾತ್ರ.**
2. **ಅಭ್ಯರ್ಥಿಗಳು / ಪೋಷಕರು ಖುದ್ದಾಗಿ ಮೂಲದಾಖಲಾತಿಗಳು, ಅರ್ಜಿಯ ಪ್ರತಿ ಹಾಗೂ ಇವುಗಳ ಎರಡು ಪ್ರತಿಗಳೊಂದಿಗೆ ಕಡ್ಡಾಯವಾಗಿ ತೆಗೆದುಕೊಂಡು ದಾಖಲಾತಿಗಳ ಪರಿಶೀಲನೆಯನ್ನು ಪೂರ್ಣಗೊಳಿಸುವುದು.**
3. **ಒಂದು ವೇಳೆ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗದೆ ಇದ್ದಲ್ಲಿ ಡಿಪ್ಲೋಮಾ ಕೋರ್ಸಿನ ಪ್ರವೇಶಕ್ಕೆ ಅನರ್ಹ ಎಂದು ಪರಿಗಣಿಸಲಾಗುವದು.**

g. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ತಮಗೆ ಅನುಕೂಲವಾಗುವ ಈ ಮೇಲಿನ ದಾಖಲಾತಿ ಪರಿಶೀಲನ ಕೇಂದ್ರಗಳಲ್ಲಿ ಯಾವುದಾದರು ಒಂದನ್ನು ಆಯ್ಕೆ ಮಾಡಿಕೊಂಡು ಅಭ್ಯರ್ಥಿಗಳು / ಪೋಷಕರು ಖುದ್ದಾಗಿ ಮೂಲದಾಖಲಾತಿಗಳು, ಅರ್ಜಿಯ ಪ್ರತಿ ಹಾಗೂ ಇವುಗಳ ಎರಡು ಪ್ರತಿಗಳೊಂದಿಗೆ ಕಡ್ಡಾಯವಾಗಿ ತೆಗೆದುಕೊಂಡು ದಾಖಲಾತಿಗಳ ಪರಿಶೀಲನೆಯನ್ನು ಪೂರ್ಣಗೊಳಿಸುವುದು.

h. ಪಶುಸಂಗೋಪನಾ ಡಿಪ್ಲೋಮಾ ಕೋರ್ಸ್‌ಗೆ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ 14.08.2023 ರಂದು ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಿಸಲಾಗುವುದು.

i. ಸರ್ಕಾರದ ಆದೇಶಗಳ ಅನ್ವಯ ಸೀಟುಗಳನ್ನು ಭರ್ತಿ ಮಾಡಲಾಗುವುದು. ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ತಾಮ್ಮು ಆಯ್ಕೆ ಮಾಡಿರುವ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳ ಆದ್ಯತೆಗನುಗುಣವಾಗಿ ಆನ್‌ಲೈನ್ ಮುಖಾಂತರ ಸೀಟುಗಳ ಹಂಚಿಕೆ ಮಾಡಲಾಗುವುದು.

j. ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳ ಪ್ರಥಮ ಆಯ್ಕೆ ಪಟ್ಟಿಯನ್ನು ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ದಿನಾಂಕ: 23.08.2024 ರಂದು ಪ್ರಕಟಿಸಲಾಗುವುದು.

k. ಪ್ರಥಮ ಆಯ್ಕೆ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ: 26.08.2024 ರಿಂದ 28.08.2024 ರವರೆಗೆ ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲಾ ಮೂಲ ದಾಖಲಾತಿಗಳನ್ನು ಸಲ್ಲಿಸುವುದು. ಒಂದು ವೇಳೆ ನಿಗದಿತ ಸಮಯದಲ್ಲಿ ಪ್ರವೇಶ ಖಾತ್ರಿ ಪಡಿಸದಿದ್ದರೆ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.

l. ಪ್ರಥಮ ಆಯ್ಕೆ ಪಟ್ಟಿಯಲ್ಲಿ ಸೀಟುಗಳು ಭರ್ತಿಯಾಗದೇ ಇದ್ದಲ್ಲಿ, ಎರಡನೇ ಆಯ್ಕೆ ಪಟ್ಟಿ ಸಿದ್ದಪಡಿಸಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ದಿನಾಂಕ: 31.08.2024 ರಂದು ಪ್ರಕಟಿಸಲಾಗುವುದು.

m. ಎರಡನೇ ಆಯ್ಕೆ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ: 03.09.2024 ರಿಂದ 05.09.2024 ರವರೆಗೆ ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲಾ ಮೂಲ ದಾಖಲಾತಿಗಳು ಸಲ್ಲಿಸುವುದು. ಒಂದು ವೇಳೆ ನಿಗದಿತ ಸಮಯದಲ್ಲಿ ಪ್ರವೇಶ ಖಾತ್ರಿ ಪಡಿಸದಿದ್ದರೆ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.

n. ಅಂತಿಮ ಸುತ್ತಿನ ಸೀಟು ಹಂಚಿಕೆ ಪೂರ್ಣಗೊಳ್ಳುವವರೆಗೂ ಅಭ್ಯರ್ಥಿಗಳು ಇತ್ತೀಚಿನ ಮಾಹಿತಿ / ವಿಷಯಗಳಿಗೆ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ನೊಂದಿಗೆ ಸದಾ ಸಂಪರ್ಕದಲ್ಲಿರಬೇಕು.

o. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಅಭ್ಯರ್ಥಿಗೆ ಪ್ರತ್ಯೇಕವಾಗಿ ಮಾಹಿತಿಯನ್ನು ತಿಳಿಸುವುದಿಲ್ಲ.

p. ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆ, ಇ–ಮೇಲ್ ಅಭ್ಯರ್ಥಿ ಅಥವಾ ಪೋಷಕರದ್ದಾಗಿರಬೇಕು. ಏಕೆಂದರೆ, ವಿಶ್ವವಿದ್ಯಾಲಯದಿಂದ ಯಾವುದೇ ವಿಷಯಗಳನ್ನು ತುರ್ತು ಸಂದರ್ಭದಲ್ಲಿ ಮಾತ್ರ ಎಸ್.ಎಂ.ಎಸ್. ಅಥವಾ ಇ–ಮೇಲ್ ಮುಖಾಂತರ ಕಳುಹಿಸಲಾಗುತ್ತದೆ.

q. ಮೊದಲನೆಯ ಸೆಮಿಸ್ಟರ್ ತರಗತಿಗಳ ಪ್ರಾರಂಭದ ದಿನಾಂಕ: 09.09.2024.

r. ಅಭ್ಯರ್ಥಿಗಳು / ಪೋಷಕರು ಯಾವುದೇ ಇತ್ತೀಚಿನ ಸುದ್ದಿ ಅಥವಾ ಮಾಹಿತಿಗಾಗಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ವನ್ನು ದಿನಾಲು ನೋಡಬೇಕು.

s. ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪಶುಸಂಗೋಪನಾ ಡಿಪ್ಲೋಮಾ ಕೋರ್ಸ್‌ನ ಪ್ರವೇಶಕ್ಕೆ ಸಂಬಂಧಿಸಿದಂತೆ ನೀಡಲಾಗುವ ಸೂಚನೆಗಳು, ಅಧಿಸೂಚನೆಗಳು ಮತ್ತು ಪ್ರಕಟಣೆಗಳನ್ನು ಸರಿಯಾಗಿ ಗಮನಿಸದ ಕಾರಣದಿಂದ ಉಂಟಾಗುವ ಯಾವುದೇ ಸಮಸ್ಯೆ / ತೊಂದರೆಗೆ ವಿಶ್ವವಿದ್ಯಾಲಯವು ಹೊಣೆಯಾಗುವುದಿಲ್ಲ.

<table>
<tr><th>ಪ್ರವೇಶ ಪ್ರಕ್ರಿಯೆಯ ವಿವರ</th><th colspan="2">ದಿನಾಂಕ</th></tr>
<tr><td>ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ</td><td colspan="2">01.07.2024<br>(ಸಾಯಂಕಾಲ 4 ಗಂಟೆ ನಂತರ)</td></tr>
<tr><td>ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ</td><td colspan="2">31.07.2024 (23:59:59 ರವರೆಗೆ)</td></tr>
<tr><td rowspan="3">ಮೂಲ ದಾಖಲಾತಿ ಪರಿಶೀಲನೆ<br><u>ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳು:</u><br>1. ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ<br>2. ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು<br>3. ಪಶುವೈದ್ಯಕೀಯ ಮಹಾವಿದ್ಯಾಲಯ, ಹೊಂಬಾಳ ರಸ್ತೆ, ಗದಗ<br>4. ಮೀನುಗಾರಿಕೆ ಮಹಾವಿದ್ಯಾಲಯ, ಕಂಕನಾಡಿ, ಮಂಗಳೂರು<br>5. ಪಶುವೈದ್ಯಕೀಯ ಮಹಾವಿದ್ಯಾಲಯ, ಗೋಕುಲ ಆವರಣ, ವಿದ್ಯಾನಗರ, ಹಾಸನ<br>ಸೂಚನೆಗಳು:<br>4. ದಾಖಲಾತಿ ಪರಿಶೀಲನೆಯ ಸಮಯ ಬೆಳಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯ ವರೆಗೆ ಮಾತ್ರ.<br>5. ಅಭ್ಯರ್ಥಿಗಳು / ಪೋಷಕರು ಖುದ್ದಾಗಿ ಮೂಲದಾಖಲಾತಿಗಳು, ಅರ್ಜಿಯ ಪ್ರತಿ ಹಾಗೂ ಇವುಗಳ ಎರಡು ಪ್ರತಿಗಳೊಂದಿಗೆ ಕಡ್ಡಾಯವಾಗಿ ತೆಗೆದುಕೊಂಡು ದಾಖಲಾತಿಗಳ ಪರಿಶೀಲನೆಯನ್ನು ಪೂರ್ಣಗೊಳಿಸುವುದು.</td><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 75% ಮೇಲ್ಪಟ್ಟ ಅಭ್ಯರ್ಥಿಗಳಿಗೆ</td><td>06.08.2024</td></tr>
<tr><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ರಿಂದ 75% ವರೆಗಿನ ಅಭ್ಯರ್ಥಿಗಳಿಗೆ</td><td>07.08.2024</td></tr>
<tr><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ಕ್ಕಿಂತ ಕೆಳಗಿನ ಅಭ್ಯರ್ಥಿಗಳಿಗೆ</td><td>08.08.2024</td></tr>
<tr><td>ವಿಶ್ವವಿದ್ಯಾಲಯದ (https://kvafsu.edu.in/admission.html) ಜಾಲತಾಣದಲ್ಲಿ ಅರ್ಹ / ಅನರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ</td><td colspan="2">14.08.2024<br>(ಮಧ್ಯಾಹ್ನ 1 ಗಂಟೆ ನಂತರ)</td></tr>
<tr><td>ಪ್ರಥಮ ಆಯ್ಕೆ ಪಟ್ಟಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಣೆ</td><td colspan="2">23.08.2024<br>(ಮಧ್ಯಾಹ್ನ 1 ಗಂಟೆ ನಂತರ)</td></tr>
<tr><td>ಪ್ರಥಮ ಆಯ್ಕೆಯ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲ ಮೂಲ ದಾಖಲಾತಿಗಳು ಸಲ್ಲಿಸುವುದು.</td><td colspan="2">26.08.2024 ರಿಂದ 28.08.2024</td></tr>
<tr><td>ಎರಡನೇ ಆಯ್ಕೆ ಪಟ್ಟಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಣೆ</td><td colspan="2">31.08.2024</td></tr>
<tr><td>ಎರಡನೇ ಆಯ್ಕೆಯ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲ ಮೂಲ ದಾಖಲಾತಿಗಳು / ಪ್ರಮಾಣ ಪತ್ರಗಳು ಸಲ್ಲಿಸುವುದು</td><td colspan="2">03.09.2024 ರಿಂದ 05.09.2024</td></tr>
<tr><td>ಶೈಕ್ಷಣಿಕ ವರ್ಷದ ಆರಂಭ</td><td colspan="2">09.09.2024</td></tr>
</table>

**ವಿಶೇಷ ಸೂಚನೆ:** ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ ಯುವ ಜನತೆಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಸತತವಾಗಿ ಪಶುಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಪಶು ಸಂಬಂಧಿತ ಉತ್ಪಾದನೆಯನ್ನು ಹೆಚ್ಚಿಸುವ ಕುರಿತು ಜ್ಞಾನವನ್ನು ಪಡೆಯುವಲ್ಲಿ ನೆರವಾಗುತ್ತದೆ. ಹಾಗೂ **ಐವಿಸಿ ಕಾಯಿದೆ, 1984ರ ಸೆಕ್ಷನ್ 30 (ಬಿ) ಅಡಿಯಲ್ಲಿ ಕರ್ನಾಟಕ ಸರ್ಕಾರವು ವ್ಯಾಖ್ಯಾನಿಸಿದಂತೆ ನೋಂದಾಯಿತ ಪಶುವೈದ್ಯಕೀಯ ವೈದ್ಯರ ಮೇಲ್ವಿಚಾರಣೆ ಮತ್ತು ನಿರ್ದೇಶನದ ಅಡಿಯಲ್ಲಿ "ಅಪ್ರಧಾನ ಪಶುವೈದ್ಯಕೀಯ ಸೇವೆಗಳಿಗೆ" ಸೀಮಿತವಾದ ಸೇವೆಗಳನ್ನು ನಿರ್ವಹಿಸಲು ಮಾತ್ರ ಅರ್ಹರಾಗಿರುತ್ತಾರೆ**. ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸರ್ಕಾರದ ವತಿಯಿಂದ ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ್ನು ಮುಗಿಸಿದ ಅಭ್ಯರ್ಥಿಗಳಿಗೆ ಯಾವುದೇ ಖಚಿತ ಸರ್ಕಾರಿ ಉದ್ಯೋಗದ ಕುರಿತು ಭರವಸೆ ಇರುವುದಿಲ್ಲ.

**"ಮಾನ್ಯ ಕುಲಪತಿಗಳಿಂದ ಅನುಮೋದನೆಗೊಳಪ್ಪಟ್ಟಿದೆ "**

ಆದೇಶ ಮೇರೆಗೆ

**ಕುಲಸಚಿವರು**

Digitally Signed by
Prakash.n
Date: 28-06-2024 14:55:08
Reason: Approved

**ಪ್ರತಿಗಳು:**

1. ವಿಸ್ತರಣಾ ನಿರ್ದೇಶಕರು, ಕ.ಪ.ಪ.ಮೀ.ವಿ.ವಿ, ಬೀದರ ಇವರ ಮಾಹಿತಿಗಾಗಿ
2. ಹಣಕಾಸು ನಿಯಂತ್ರಣಾಧಿಕಾರಿಗಳು, ಕ.ಪ.ಪ.ಮೀ.ವಿ.ವಿ, ಬೀದರ ಇವರ ಮಾಹಿತಿಗಾಗಿ
3. ಪ್ರಾಚಾರ್ಯರು ಪಶುಸಂಗೋಪನೆ ಪಾಲಿಟೆಕ್ನಿಕ್, ಕೊನೇಹಳ್ಳಿ/ಕೂನ್ನೂರು/ಕೋರವಂಗಲ ಗೇಟ್ / ಬರಗಿ / ಡೋರನಹಳ್ಳಿ ಇವರ ಮಾಹಿತಿಗಾಗಿ.
4. ಹಿರಿಯ ಆಪ್ತ ಕಾರ್ಯದರ್ಶಿಗಳು ಗ್ರೇಡ-1, ಮಾನ್ಯ ಕುಲಪತಿಗಳ ಕಾರ್ಯಾಲಯ, ಕಪಪಮೀವಿವಿ,ಬೀದರ ಇವರ ಮಾಹಿತಿಗಾಗಿ.
5. ಕಛೇರಿ ಕಡತ-Diploma Admission 2024-25.

# ಡಿಪ್ಲೋಮಾ(ಪಶು ಸಂಗೋಪನೆ) ಶೈಕ್ಷಣಿಕ ಮಾಹಿತಿ/ವಿವರಣಾ ಪತ್ರಿಕೆ (Prospectus)

ಈ ಕೋರ್ಸ್‌ಗೆ ಸಂಬಂಧಪಟ್ಟಂತೆ ನಿಯಮಾವಳಿಗಳು, ಕೋರ್ಸ್‌ನ ಶೈಕ್ಷಣಿಕ ಮಾಹಿತಿ, ಪರೀಕ್ಷೆ ಮತ್ತು ಮೌಲ್ಯಮಾಪನ ಪದ್ಧತಿ ಹಾಗೂ ಶಿಸ್ತು ನಿಯಮಗಳನ್ನು ಒಳಗೊಂಡಿದ್ದು, ನೋಂದಣಿಯ ಸಮಯದಲ್ಲಿ ಅಭ್ಯರ್ಥಿಗಳಿಗೆ ಶೈಕ್ಷಣಿಕ ಮಾಹಿತಿ ಪತ್ರಿಕೆಯನ್ನು ಒದಗಿಸಲಾಗುವುದು.

**ಪ್ರವೇಶಕ್ಕೆ ಶೈಕ್ಷಣಿಕ ಅರ್ಹತೆ ಹಾಗೂ ಆಯ್ಕೆ:**

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದ ನಿವಾಸಿಯಾಗಿದ್ದು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ/ ತತ್ಸಮಾನ ಪರೀಕ್ಷೆಯೊಂದಿಗೆ ಕನ್ನಡ ಒಂದು ವಿಷಯವನ್ನು ಕಡ್ಡಾಯವಾಗಿ ಓದಿ ಕನಿಷ್ಠ ಶೇ. 45 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು (ಪ.ಜಾತಿ/ಪ.ಪಂಗಡ/ಪ್ರವರ್ಗ–1ರ ಅಭ್ಯರ್ಥಿಗಳು ಶೇ.40 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು) ಮತ್ತು ಕಡ್ಡಾಯವಾಗಿ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಯ ವಯಸ್ಸು 20 ವರ್ಷ ಮೀರಿರಬಾರದು.

ಎಸ್.ಎಸ್.ಎಲ್.ಸಿ/ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ, ಮೆರಿಟ್ ಹಾಗೂ ರೋಸ್ಟರ್ ಪದ್ಧತಿ ಆಧರಿಸಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

**ಸೀಟುಗಳ ಮೀಸಲಾತಿ:**

ಅಭ್ಯರ್ಥಿಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗಳಿಗೆ ಆಯ್ಕೆ ಮಾಡುವಾಗ ಈ ಕೆಳಗಿನಂತೆ ಮೀಸಲಾತಿ ಅನುಸರಿಸಲಾಗುವುದು.

**I.** ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಸರಕಾರದ ಆದೇಶ ನಂ. ಎಸ್‌ಡಬ್ಲೂಎಲ್/251/ಬಿಸಿಎ/84 ದಿ. 31.01.1995 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಆದೇಶಗಳಂತೆ ಎಸ್.ಸಿ, ಎಸ್.ಟಿ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಮೀಸಲಾತಿ ಅನುಸರಿಸಲಾಗುವುದು.

**ಟಿಪ್ಪಣಿ –1:** ಸರಕಾರಿ ಆದೇಶ ನಂ. ಎಸ್‌ಡಬ್ಲೂಎಲ್/225/ಬಿಸಿಎ/2000 ದಿ. 30.03.2002 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಈ ಕೆಳಗಿನ ಅಭ್ಯರ್ಥಿಗಳು 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಲ್ಲಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ.

1. ಮೇಲಿನ ಸರಕಾರಿ ಆದೇಶದ ಐಟಂ–1 ರಡಿಯಲ್ಲಿ ನಮೂದಿಸಿದ ವ್ಯಕ್ತಿಗಳ ಮಗ/ಮಗಳು.
2. ಸರಕಾರಿ ಮತ್ತು ಅರೆ ಸರಕಾರಿ ಸಂಸ್ಥೆಗಳಲ್ಲಿ ಎ–ಶ್ರೇಣಿ, ಬಿ–ಶ್ರೇಣಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಮಗ/ಮಗಳು ಅಥವಾ ಖಾಸಗಿ ಸಂಸ್ಥೆಯಲ್ಲಿ ಬಿ–ಶ್ರೇಣಿ ಹುದ್ದೆ ಅಧಿಕಾರಿಯ ವೇತನಕ್ಕೆ ಸಮನಾಗಿ (ರೂ. 43100–83900 ವೇತನ ಶ್ರೇಣಿ) ವೇತನ ಹೊಂದಿರುವ ವ್ಯಕ್ತಿಯ ಮಗ/ಮಗಳು.
3. ಅಭ್ಯರ್ಥಿಯ ಹಾಗೂ ತಂದೆ–ತಾಯಿ/ಪೋಷಕರ ವಾರ್ಷಿಕ ಆದಾಯವು ರೂ. 8.0 ಲಕ್ಷಕ್ಕಿಂತಲೂ ಮೀರಿದ್ದರೆ, ಅಭ್ಯರ್ಥಿಯು ಹಾಗೂ ತಂದೆ/ತಾಯಿ/ಪೋಷಕರು ಕರ್ನಾಟಕ ಜಮೀನು ಪರಿಷ್ಕರಣೆ ಕಾಯಿದೆ 1961 ರಲ್ಲಿ ನಿಗದಿ ಪಡಿಸಿದಂತೆ 10 ಯೂನಿಟ್ ಕೃಷಿ ಜಮೀನು ಹೊಂದಿದ್ದರೆ ಹಾಗೂ 20 ಎಕರೆಗಿಂತಲೂ ಹೆಚ್ಚಿನ ಪ್ಲಾಂಟೇಶನ್ ಜಮೀನು ಹೊಂದಿದ್ದರೆ.
4. ಕಲ್ಯಾಣ–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಪ್ರವೇಶಾತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.
5. ಗಡಿನಾಡು ಕನ್ನಡಿಗರಿಗೂ ಕೂಡ ಮೀಸಲಾತಿ ನೀಡಲಾಗುವುದು.
6. ವಿಶೇಷ ಗುಂಪಿನ ಅಭ್ಯರ್ಥಿಗಳಾದ ಎನ್.ಸಿ.ಸಿ/ಕ್ರೀಡೆ/ಸ್ಕೌಟ್ಸ್&ಗೈಡ್ಸ್/ಡಿಫೆನ್ಸ್/ಮಾಜಿ ಸೈನಿಕ/ಅಂಗವಿಕಲ/ಆಂಗ್ಲೋ ಇಂಡಿಯನ್ ಇವುಗಳಿಗೆ ಮೀಸಲಾತಿ ನೀಡಲಾಗುವುದು.

**ಟಿಪ್ಪಣಿ:**–2 ಈ ಮೇಲಿನ ಗುಂಪುಗಳಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ–3:** ಎಸ್.ಸಿ./ಎಸ್.ಟಿ ಹಾಗೂ ಇತರೆ ಹಿಂದುಳಿದ ವರ್ಗಗಳಲ್ಲಿ (ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ) ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ–4:** ವರ್ಟಿಕಲ್ ಮೀಸಲಾತಿಯನ್ವಯ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಇಂತಹ ಮೀಸಲಾತಿ ಸೀಟುಗಳನ್ನು "ಸಾಮಾನ್ಯ ವರ್ಗ"ದ ಸೀಟುಗಳೆಂದು ಪರಿಗಣಿಸಿ, ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

**ಟಿಪ್ಪಣಿ–5:** ಗಡಿನಾಡು ಕನ್ನಡಿಗ ಪ್ರಮಾಣ ಪತ್ರ ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

7. ಕೃಷಿ ಕೋಟದಡಿ ಎರಡು ವರ್ಷದ ಡಿಪ್ಲೋಮೊ (ಪಶುಸಂಗೋಪನೆ) ಪ್ರವೇಶಾತಿ ಬಯಸಿ ಬರತಕ್ಕಂತಹ ಅಭ್ಯರ್ಥಿಗಳು ಮುಖ್ಯವಾಗಿ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಲಗತ್ತಿಸಬೇಕು (ನಮೂನೆಗಳನ್ನು ಲಗತ್ತಿಸಲಾಗಿದೆ).
   - ವ್ಯವಸಾಯಗಾರರ ಪ್ರಮಾಣ ಪತ್ರ / ಕೃಷಿ ಮತ್ತು ಕೃಷಿ ಸಂಬಂಧಿತ ಕೂಲಿ ಕಾರ್ಮಿಕರ ಪ್ರಮಾಣ ಪತ್ರ – RD ಸಂಖ್ಯೆಯೊಂದಿಗೆ ಕಂದಾಯ ಇಲಾಖೆಯಲ್ಲಿ ಕೊಡುವ ಪ್ರಮಾಣ ಪತ್ರ ಅಥವಾ ಸ್ವೀಕೃತ ಪತ್ರ RD ಸಂಖ್ಯೆಯೊಂದಿಗೆ.
   - ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕೃಷಿಕರ ಕೋಟಾದಡಿಯಲ್ಲಿ ಅರ್ಜಿಯನ್ನು ಪರಿಗಣಿಸಲು ಕಡ್ಡಾಯವಾಗಿ ಲಗತ್ತಿಸುವುದು RD ಸಂಖ್ಯೆ ಮತ್ತು QR ಕೋಡ್‌ನೊಂದಿಗೆ ತಹಶೀಲ್ದಾರ್ ರವರು ಕೊಡುವ ಪ್ರಮಾಣ ಪತ್ರ

**ಪ್ರವೇಶಕ್ಕೆ ಅರ್ಜಿ:**

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯದ ಜಾಲತಾಣ https://kvafsu.edu.in/admission.html ದಲ್ಲಿ ಅರ್ಜಿ ಭರ್ತಿಮಾಡುವುದು ಮತ್ತು ಅಂತಿಮವಾಗಿ ಸಲ್ಲಿಕೆ ಮಾಡಿದ ಆನ್‌ಲೈನ್ ಅರ್ಜಿ, ಅರ್ಜಿ ಶುಲ್ಕ ಪಾವತಿ ವಿವಿರ / ರಶೀದಿ ಹಾಗೂ ಇತರೆ ದಾಖಲಾತಿಗಳು / ಪ್ರಮಾಣ ಪತ್ರಗಳ ಎರಡು ಪ್ರತಿಗಳು ದಾಖಲಾತಿ ಪರಿಶೀಲನೆಯ ಸಂದರ್ಭದಲ್ಲಿ ಸಲ್ಲಿಸಬೇಕು.

**ಪ್ರವೇಶ ವಿಧಾನ:**

ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇರೆಗೆ ಸರಕಾರದ ಮೀಸಲಾತಿ ಆದೇಶದಂತೆ ಹಾಗೂ ಮೆರಿಟ್ ಆಧರಿಸಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು.

**ಡಿಪ್ಲೋಮಾ (ಪಶು ಸಂಗೋಪನೆ) ಕೋರ್ಸ್‌ನ ಶುಲ್ಕದ ವಿವರ:**

ಆಯ್ಕೆಯಾದ ಅಭ್ಯರ್ಥಿಗಳು ಈ ವಿವರಣ ಪತ್ರಿಕೆಯೊಂದಿಗೆ (ಪ್ರೋಸ್ಪೆಕ್ಟಸ್) ಲಗತ್ತಿಸಿದ ಅನುಬಂಧ–1ರಂತೆ ಸಂಬಂಧಪಟ್ಟ ಡಿಪ್ಲೋಮಾ (ಪಶು ಸಂಗೋಪನೆ) ಕೋರ್ಸ್‌ಗೆ ನಿಗದಿಪಡಿಸಿದ ಶುಲ್ಕದ ವಿವರವನ್ನು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ನಲ್ಲಿ ಪಾವತಿ ಮಾಡಬೇಕು.

**ಅಭ್ಯರ್ಥಿಗಳು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:**

- ಪ್ರವೇಶದ ವಿವರಣಾ ಪತ್ರಿಕೆ (prospectus)ಯಲ್ಲಿ ನಿಗದಿಪಡಿಸಿದಂತೆ ಪ್ರವೇಶದ ಆನ್‌ಲೈನ್ ಅರ್ಜಿಯಲ್ಲಿ ಎಲ್ಲಾ ವಿವರಗಳನ್ನು ನಮೂದಿಸಬೇಕು ಹಾಗೂ ಆನ್‌ಲೈನ್ ಅರ್ಜಿಯೊಂದಿಗೆ ಅಭ್ಯರ್ಥಿಗಳು ತಮ್ಮ ಸೂಕ್ತ ದಾಖಲೆಗಳ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು ಮತ್ತು ಅಪೂರ್ಣ ಆನ್‌ಲೈನ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಈ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅನಿವಾರ್ಯ ಕಾರಣಗಳಿಂದ ಯಾವುದೇ ಬದಲಾವಣೆಯಾದಲ್ಲಿ ಅದನ್ನು ಪ್ರಮುಖ ದಿನಪತ್ರಿಕೆಗಳು ಹಾಗೂ ವಿಶ್ವವಿದ್ಯಾಲಯದ ಅಂತರ್ಜಾಲ (www.kvafsu.edu.in)ದ ಮೂಲಕ ಪ್ರಕಟಿಸಲಾಗುವುದು. ಈ ಕುರಿತಂತೆ ಪ್ರತಿ ಅಭ್ಯರ್ಥಿಗೆ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.
- ಈ ಪ್ರವೇಶವು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆ–ಕಾನೂನುಗಳಿಗೆ ಹಾಗೂ ಸರಕಾರಿ ಆದೇಶಗಳ ಅನ್ವಯ ಅಭ್ಯರ್ಥಿಯ ಅರ್ಹತೆಯನ್ನು ಅವಲಂಬಿಸಿದೆ.
- ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ದಿನಾಂಕ: **23.08.2024** ರಂದು ಪ್ರಕಟಿಸಲಾಗುವುದು.
- ಪ್ರಥಮ ಆಯ್ಕೆ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ: **26.08.2024** ರಿಂದ **28.08.2024** ರವರೆಗೆ ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲಾ ಮೂಲ ದಾಖಲಾತಿಗಳು ಸಲ್ಲಿಸುವುದು. ಒಂದು ವೇಳೆ ನಿಗದಿತ ಸಮಯದಲ್ಲಿ ಪ್ರವೇಶ ಖಾತ್ರಿ ಪಡಿಸದಿದ್ದರೆ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.
- ಪ್ರಥಮ ಆಯ್ಕೆ ಪಟ್ಟಿಯಲ್ಲಿ ಸೀಟುಗಳು ಭರ್ತಿಯಾಗದೇ ಇದ್ದಲ್ಲಿ, ಎರಡನೇ ಆಯ್ಕೆ ಪಟ್ಟಿ ಸಿದ್ದಪಡಿಸಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ದಿನಾಂಕ: **31.08.2024** ರಂದು ಪ್ರಕಟಿಸಲಾಗುವುದು.
- ಎರಡನೇ ಆಯ್ಕೆ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ: **03.09.2024** ರಿಂದ **05.09.2024** ರವರೆಗೆ ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲಾ ಮೂಲ ದಾಖಲಾತಿಗಳು ಸಲ್ಲಿಸುವುದು. ಒಂದು ವೇಳೆ ನಿಗದಿತ ಸಮಯದಲ್ಲಿ ಪ್ರವೇಶ ಖಾತ್ರಿ ಪಡಿಸದಿದ್ದರೆ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.
- ಅಂತಿಮ ಸುತ್ತಿನ ಸೀಟು ಹಂಚಿಕೆ ಪೂರ್ಣಗೊಳ್ಳುವವರೆಗೂ ಅಭ್ಯರ್ಥಿಗಳು ಇತ್ತೀಚಿನ ಮಾಹಿತಿ / ವಿಷಯಗಳಿಗೆ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ನೊಂದಿಗೆ ಸದಾ ಸಂಪರ್ಕದಲ್ಲಿರಬೇಕು.
- ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಅಭ್ಯರ್ಥಿಗೆ ಪ್ರತ್ಯೇಕವಾಗಿ ಮಾಹಿತಿಯನ್ನು ತಿಳಿಸುವುದಿಲ್ಲ.
- ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆ, ಇ–ಮೇಲ್ ಅಭ್ಯರ್ಥಿ ಅಥವಾ ಪೋಷಕರಾಗಿರಬೇಕು. ಏಕೆಂದರೆ, ವಿಶ್ವವಿದ್ಯಾಲಯದಿಂದ ಯಾವುದೇ ವಿಷಯಗಳನ್ನು ತುರ್ತು ಸಂದರ್ಭದಲ್ಲಿ ಮಾತ್ರ ಎಸ್.ಎಂ.ಎಸ್. ಅಥವಾ ಇ–ಮೇಲ್ ಮುಖಾಂತರ ಕಳುಹಿಸಲಾಗುತ್ತದೆ.
- ಮೊದಲನೆಯ ಸೆಮಿಸ್ಟರ್ ತರಗತಿಗಳ ಪ್ರಾರಂಭದ ದಿನಾಂಕ: **09.09.2024.**
- ಅಭ್ಯರ್ಥಿಗಳು / ಪೋಷಕರು ಯಾವುದೇ ಇತ್ತೀಚಿನ ಸುದ್ದಿ ಅಥವಾ ಮಾಹಿತಿಗಾಗಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ವನ್ನು ದಿನಾಲು ನೋಡಬೇಕು.
- ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪಶುಸಂಗೋಪನಾ ಡಿಪ್ಲೋಮಾ ಕೋರ್ಸ್‌ನ ಪ್ರವೇಶಕ್ಕೆ ಸಂಬಂಧಿಸಿದಂತೆ ನೀಡಲಾಗುವ ಸೂಚನೆಗಳು, ಅಧಿಸೂಚನೆಗಳು ಮತ್ತು ಪ್ರಕಟಣೆಗಳನ್ನು ಸರಿಯಾಗಿ ಗಮನಿಸದ ಕಾರಣದಿಂದ ಉಂಟಾಗುವ ಯಾವುದೇ ಸಮಸ್ಯೆ / ತೊಂದರೆಗೆ ವಿಶ್ವವಿದ್ಯಾಲಯವು ಹೊಣೆಯಾಗುವುದಿಲ್ಲ.

## ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿ ನಗರ ಬೀದರ – 585 226 (**ಅನುಬಂಧ–1**)

**2024–25ನೇ ಸಾಲಿನಲ್ಲಿ ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸಗೆ ಆಯ್ಕೆಯಾದ ಅಭ್ಯರ್ಥಿಯು ಸಂದಾಯ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.**

| ಕ್ರ.ಸಂ | ವಿವರ | **1ನೇ ಸೆಮಿಸ್ಟರ್** | | **2ನೇ ಸೆಮಿಸ್ಟರ್** | | **3ನೇ ಸೆಮಿಸ್ಟರ್** | | **4ನೇ ಸೆಮಿಸ್ಟರ್** | |
|---|---|---|---|---|---|---|---|---|---|
| | | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ ಪ್ರವರ್ಗ–1 | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ ಪ್ರವರ್ಗ–1 | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ ಪ್ರವರ್ಗ–1 | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ ಪ್ರವರ್ಗ–1 |
| 1 | ನೋಂದಣಿ | 120 | 120 | 120 | 120 | 120 | 120 | 120 | 120 |
| 2 | ಬೋಧನಾ ಶುಲ್ಕ | 3270 | – | – | – | 3270 | – | – | – |
| 3 | ಗ್ರಂಥಾಲಯ ಶುಲ್ಕ | 1115 | 1115 | – | – | 1115 | 1115 | – | – |
| 4 | ಪ್ರಯೋಗಾಲಯ ಶುಲ್ಕ | 120 | – | 120 | – | 120 | – | 120 | – |
| 5 | ಪ್ರವೇಶ ಶುಲ್ಕ | 390 | – | – | – | 390 | – | – | – |
| 6 | ಕ್ರೀಡಾ ಶುಲ್ಕ | 120 | – | 120 | – | 120 | – | 120 | – |
| 7 | ಶೈಕ್ಷಣಿಕ ಮಾಹಿತಿ ಮತ್ತು ನಿಯಮಗಳ ಕೈಪಿಡಿ | 90 | 90 | – | – | – | – | – | – |
| 8 | ವೈದ್ಯಕೀಯ ಶುಲ್ಕ | 95 | 95 | 95 | 95 | 95 | 95 | 95 | 95 |
| 9 | ಭದ್ರತಾ ಠೇವಣಿ (ಮರುಪಾವತಿಗೊಳಪಟ್ಟಿದ್ದು) | 385 | – | – | – | – | – | – | – |
| 10 | ಪರೀಕ್ಷಾ ಶುಲ್ಕ | 425 | – | 425 | – | 425 | – | 425 | – |
| 11 | ಗುರುತಿನ ಚೀಟಿ ಶುಲ್ಕ | ನಿಗದಿಪಡಿಸಲಾಗುವುದು | | | | | | | |
| 12 | ಜೀವವಿಮೆ ಶುಲ್ಕ | ನಿಗದಿಪಡಿಸಲಾಗುವುದು | | | | | | | |
| | ಒಟ್ಟು | **6130** | **1420** | **880** | **215** | **5655** | **1330** | **880** | **215** |

**<u>ನೋಂದಣಿ:</u>**

ವಿಶ್ವವಿದ್ಯಾಲಯದಿಂದ ಪ್ರವೇಶ ಪಡೆದ ಅಭ್ಯರ್ಥಿಯು ನೋಂದಣಿಯಾದ ನಂತರವೇ ಪ್ರವೇಶ ಪ್ರಕ್ರಿಯೆಯು ಪೂರ್ಣವಾಗುವುದು. ಆದ್ದರಿಂದ ಪ್ರವೇಶ ಪಡೆದ ಅಭ್ಯರ್ಥಿಗಳು ಖುದ್ದಾಗಿ ತಮ್ಮ ಆಯ್ಕೆಯ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹಾಜರಾಗಿ ಡಿಪ್ಲೋಮಾ ಕೋರ್ಸ್‌ಗೆ ನೋಂದಣಿ ಮಾಡಿಸಬೇಕು. ಮೊದಲನೆಯ ಸೆಮಿಸ್ಟರ್‌ದಲ್ಲಿ ನಿಗದಿತ ದಿನಾಂಕದೊಳಗೆ ಕೋರ್ಸ್‌ಗೆ ನೋಂದಣಿ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಯ ಆಯ್ಕೆ ರದ್ದಾಗುವುದು.

ಆಯ್ಕೆಯಾದ ಅಭ್ಯರ್ಥಿಯು ನಿಗದಿಪಡಿಸಿದ ಎಲ್ಲ ಶುಲ್ಕವನ್ನು ಪಾವತಿಮಾಡಿ ಸೆಮಿಸ್ಟರ್ ಪ್ರಾರಂಭದ ಮೊದಲನೆಯ ದಿನದಂದು ನೋಂದಣಿಗಾಗಿ ಸಂಬಂಧಪಟ್ಟ ಪಶುಸಂಗೋಪನೆ ಪಾಲಿಟೆಕ್ನಿಕ್ ನಲ್ಲಿ ಹಾಜರಿರಬೇಕು. ಹೊಸದಾಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಂಬಂಧಿಸಿದ ಪ್ರಾಚಾರ್ಯರು ಓರಿಯಂಟೇಶನ್ ಕಾರ್ಯಕ್ರಮ ಹಮ್ಮಿಕೊಂಡು ಕೋರ್ಸ್‌ಗಳ ಬಗ್ಗೆ ವಿವರ ಮಾಹಿತಿ ನೀಡುವರು.

ಪ್ರವೇಶ ಪಡೆದ ಅಭ್ಯರ್ಥಿಯು ಮೊದಲನೆಯ ಸೆಮಿಸ್ಟರ್‌ದಲ್ಲಿ ಅಭ್ಯಸಿಸುವುದು ಕಡ್ಡಾಯ, ಯಾವುದೇ ಕಾರಣಕ್ಕೂ ಮೊದಲ ಸೆಮಿಸ್ಟರ್‌ದಲ್ಲಿ ಗೈರಾದಲ್ಲಿ ಅವರ ಪ್ರವೇಶವು ರದ್ದಾಗುವುದು. ಮೊದಲ ಸೆಮಿಸ್ಟರ್‌ದಲ್ಲಿ ಅಭ್ಯರ್ಥಿಯು ಕನಿಷ್ಠ ಒಂದು ವಿಷಯದಲ್ಲಿ SA (ಕಡಿಮೆ ಹಾಜರಾತಿ) US (ಅಸಮಾಧಾನಕರ) ಅಥವಾ F (ಫೇಲ್) ಈ ಶ್ರೇಣಿಗಳನ್ನು ಹೊರತುಪಡಿಸಿ ಉಳಿದ ಶ್ರೇಣಿಯನ್ನು ಪಡೆದು ಪಾಸಾಗಬೇಕು, ಇಲ್ಲದಿದ್ದಲ್ಲಿ ಅಂತಹವರ ಪ್ರವೇಶವು ರದ್ದಾಗುವುದು.

**ವಸತಿನಿಲಯ ಸೌಲಭ್ಯ :** ಲಭ್ಯವಿದ್ದಲ್ಲಿ ಮಾತ್ರ ಕೊಡಲಾಗುವುದು

**ವೈದ್ಯಕೀಯ ಸೌಲಭ್ಯ:** ಎಲ್ಲಾ ಶಿಕ್ಷಣ ಕೇಂದ್ರಗಳ ಆವರಣದಲ್ಲಿ ಪ್ರಾಥಮಿಕ ಆರೋಗ್ಯ ಚಿಕಿತ್ಸೆಗಾಗಿ ಸೂಕ್ತ ವೈದ್ಯಕೀಯ ಸೌಲಭ್ಯವಿರುವುದು.

**ಸಾಮಾನ್ಯ ಮಾಹಿತಿ:**

ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಬದ್ಧವಾಗಿರಬೇಕು. ವಿದ್ಯಾರ್ಥಿಗಳ ಶಿಸ್ತು ಬದ್ಧ ನಡವಳಿಕೆಗಳ ವಿವರವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳ ಕೈಪಿಡಿಯಲ್ಲಿ ವಿವರಿಸಲಾಗಿದೆ. ಪ್ರವೇಶಪಡೆದ ಎಲ್ಲಾ ಅಭ್ಯರ್ಥಿಗಳು ತಾವು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ನಿಯಮಾವಳಿಗಳಿಗೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾಗುವ ನಿಯಮಾವಳಿಗಳಿಗೆ ಬದ್ಧವಾಗಿದ್ದು, ಅದರಂತೆ ನಡೆದುಕೊಳ್ಳುವ ಬಗ್ಗೆ ಬರವಣಿಗೆಯಲ್ಲಿ ಮುಚ್ಚಳಿಕೆ ಪತ್ರ ಕೊಡುವುದು ಕಡ್ಡಾಯವಾಗಿರುವುದು.

ಈ ವಿವರಣಾ ಪತ್ರಿಕೆ (Prospectus)ನಲ್ಲಿ ನಮೂದಿಸಿದ/ನಿಗದಿಪಡಿ'ಸಿದ ಯಾವುದೇ ಅಥವಾ ಎಲ್ಲಾ ನಿಬಂಧನೆಗಳನ್ನು ಬದಲಾವಣೆ ಮಾಡುವ ಹಕ್ಕನ್ನು ವಿಶ್ವವಿದ್ಯಾಲಯ ಹೊಂದಿದೆ.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

## ವ್ಯವಸಾಯಗಾರರ ದೃಢೀಕರಣ ಪತ್ರ

ದೃಢೀಕರಣ ಪತ್ರದ ಸಂಖ್ಯೆ:RD........................................................................

ಶ್ರೀ. ............................................................................ಬಿನ್ ಶ್ರೀ.......................................................(ತಂದೆಯ ಹೆಸರು) ಮತ್ತು ಶ್ರೀಮತಿ..............................................................(ತಾಯಿಯ ಹೆಸರು) ರವರು.................................................... ಹೋಬಳಿ, ವಿಳಾಸ...........................................................ಗ್ರಾಮದ.............................................................................ಹೋಬಳಿ ..................................ತಾಲ್ಲೂಕು................................. ಜಿಲ್ಲೆಯ ವಾಸಿಯಾಗಿದ್ದು, ಇವರು ಈ ಕೆಳಕಂಡ ಕೃಷಿ ಭೂಮಿ ಹೊಂದಿದ್ದು, ಖುದ್ದು ಸ್ವಾದೀನಾನುಭವ ಹೊಂದಿರುತ್ತಾರೆ.

| ಜಿಲ್ಲೆ | ತಾಲ್ಲೂಕು | ಹೋಬಳಿ | ಗ್ರಾಮ | ಉಪ ಗ್ರಾಮ | ಸರ್ವೆ ನಂ | ವಿಸ್ತೀರ್ಣ (ಎ/ಗು/ಅ) | ಮಾಲಿಕತ್ವ ಸ್ವರೂಪ |
|---|---|---|---|---|---|---|---|
| | | | | | | | |

ಅರ್ಜಿದಾರರು ಸ್ವಂತ ವ್ಯವಸಾಯಗಾರರಾದ್ದು ಹಾಗೂ ಇವರು ವ್ಯವಸಾಯದಿಂದಲೇ ಪ್ರಧಾನ ಆದಾಯ ಹೊಂದಿರುತ್ತಾರೆಂಉ ದೃಢೀಕರಿಸಿದ ಈ ದೃಢೀಕರಣ ಪತ್ರವು ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತದೆ.

ದಿನಾಂಕ:.......................

ಟಿಪ್ಪಣಿ: ಈ ದೃಢೀಕರಣ ಪತ್ರವು ವಿದ್ಯುನ್ಮಾನ ಸಹಿಯನ್ನು ಹೊಂದಿದ್ದು,
ಕೈ ಬರಹದ ಸಹಿಯ ಅವಶ್ಯಕತೆ ಇರುವುದಿಲ್ಲ.
ದಯವಿಟ್ಟು ಈ ಪ್ರಮಾಣ ಪತ್ರದ ನೈಜತೆಯನ್ನು
ಪರೀಶೀಲಿಸಲು ನಾಡಕಛೇರಿ ವೆಬ್‌ಸೈಟ್......................... ಪ್ರವೇಶ
ಹೊಂದಿ ಪ್ರಮಾಣ ಪತ್ರದ ಸಂಖ್ಯೆಯನ್ನು ನಮೂದಿಸುವುದು ಅಥವಾ ಎಸ್‌ಎಂಎಸ್ ಸಂಖ್ಯೆ ....

ಹೆಸರು.......................................

ಉಪ ತಹಸೀಲ್ದಾರ
...................

ಹೋಬಳಿ

....................ತಾಲ್ಲೂಕು

.........................ಜಿಲ್ಲೆ.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರ

ದೃಢೀಕರಣ ಪತ್ರದ ಸಂಖ್ಯೆ: **RD**..........................................................................

ಶ್ರೀ. ..................................................................................ಬಿನ್ ಶ್ರೀ.......................................... (ತಂದೆಯ ಹೆಸರು)

ಮತ್ತು ಶ್ರೀಮತಿ...........................................................(ತಾಯಿಯ ಹೆಸರು) ರವರು....................................

............................ಹೋಬಳಿ, ವಿಳಾಸ.................................ಗ್ರಾಮದ....................................ಹೋಬಳಿ

.........................ತಾಲ್ಲೂಕು................................... ಜಿಲ್ಲೆಯ ವಾಸಿಯಾಗಿದ್ದು ಅವರ ತಂದೆ ಶ್ರೀ. ..........................................ಅವರು

ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವಂತೆ ಜಮೀನುಗಳನ್ನು ಹೊಂದಿರುವುದರಿಂದ ಅರ್ಜಿದಾರರು ವ್ಯವಸಾಯಗಾರರ ಕುಟುಂಬಕ್ಕೆ ಸೇರಿದವರೆಂದು ದೃಢೀಕರಿಸಿದೆ.

| ಜಿಲ್ಲೆ | ತಾಲ್ಲೂಕು | ಹೋಬಳಿ | ಗ್ರಾಮ | ಉಪ ಗ್ರಾಮ | ಸರ್ವೆ ನಂ | ಜಮೀನು ತರಹೆ | ವಿಸ್ತೀರ್ಣ (ಎ/ಗು/ಅ) |
|---|---|---|---|---|---|---|---|
| | | | | | | | |

ದಿನಾಂಕ:......................

ಹೆಸರು....................................

ಉಪ ತಹಸೀಲ್ದಾರ

....................

ಹೋಬಳಿ

........................ತಾಲ್ಲೂಕು

.........................ಜಿಲ್ಲೆ.

ಟಿಪ್ಪಣಿ: ಈ ದೃಢೀಕರಣ ಪತ್ರವು ವಿದ್ಯುನ್ಮಾನ ಸಹಿಯನ್ನು ಹೊಂದಿದ್ದು, ಕೈ ಬರಹದ ಸಹಿಯ ಅವಶ್ಯಕತೆ ಇರುವುದಿಲ್ಲ. ದಯವಿಟ್ಟು ಈ ಪ್ರಮಾಣ ಪತ್ರದ ನೈಜತೆಯನ್ನು ಪರೀಶೀಲಿಸಲು ನಾಡಕಛೇರಿ ವೆಬ್‌ಸೈಟ್.................................... ಪ್ರವೇಶ ಹೊಂದಿ ಪ್ರಮಾಣ ಪತ್ರದ ಸಂಖ್ಯೆಯನ್ನು ನಮೂದಿಸುವುದು ಅಥವಾ ಎಸ್‌ಎಂಎಸ್ ಸಂಖ್ಯೆ ---------